ಹತ್ತನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿನಿಯೊಬ್ಬಳ ತಾಯಿ ಮಗಳ ಹಲವಾರು ಸಮಸ್ಯೆಗಳ ಬಗೆಗೆ ನನ್ನ ಸಹಾಯ ಕೇಳಿದ್ದರು. ಅದರಲ್ಲಿ ಕೆಲವು ಲೈಂಗಿಕ ವಿಷಯಕ್ಕೆ ಸಂಬಂಧಪಟ್ಟದ್ದಾಗಿತ್ತು. ವಿದ್ಯಾರ್ಥಿನಿಯ ಹೆಸರನ್ನು ಮುಗುದೆ ಎಂದಿಟ್ಟುಕೊಳ್ಳೋಣ. ನಾನು ಮುಗುದೆಯನ್ನು ಕೇಳಿದೆ, 'ನಿಮಗೆ ಪ್ರಾಣಿಗಳಲ್ಲಿ ಸಂತಾನೋತ್ಪತ್ತಿಯ **(Reproduction)** ಬಗೆಗೆ ಜೀವ ವಿಜ್ಞಾನದಲ್ಲಿ ಪಾಠವಿತ್ತಲ್ಲವೇ, ಅದರಲ್ಲಿ ಏನು ಕಲಿತಿದ್ದೆ?'

ಮುಗುದೆಯ ಉತ್ತರ ನನಗೆ ಆಶ್ಚರ್ಯ ಉಂಟುಮಾಡಿತ್ತು.'ಆ ಪಾಠವನ್ನು ನಮಗೆ ಮಾಡಲೇ ಇಲ್ಲ. ಏಕೆ ಎಂದು ಮಿಸ್‌ಅನ್ನು ಕೇಳಿದ್ದಕ್ಕೆ ಅವರು, 'ತರಗತಿಯಲ್ಲಿ ಗಂಡು ಮಕ್ಕಳು ಇರುತ್ತಾರೆ, ಹಾಗಾಗಿ ಮಾಡುತ್ತಿಲ್ಲ' ಎಂದು ಉತ್ತರಿಸಿದರು'.

ಇದನ್ನು ಹೇಗೆ ಅರ್ಥಮಾಡಿಕೊಳ್ಳುವುದು? ಒಬ್ಬ ಮಹಿಳೆಯಾಗಿದ್ದಕ್ಕೆ ಗಂಡು ಮಕ್ಕಳಿಗೆ ಈ ಪಾಠವನ್ನು ಮಾಡಲು ಅವರಿಗೆ ಮುಜುಗರವಾಗಿರಬಹುದೇ? ಹಾಗಿದ್ದರೆ ಕಡೆಯ ಪಕ್ಷ ಈ ಪಾಠಕ್ಕಾಗಿ ಗಂಡು ಮತ್ತು ಹೆಣ್ಣು ಮಕ್ಕಳನ್ನು ಬೇರೆಯಾಗಿಸಿ ಅದೇ ಲಿಂಗದ ಶಿಕ್ಷಕರು ಪಾಠ ಮಾಡಬಹುದಿತ್ತಲ್ಲವೇ? ಮಕ್ಕಳಿಗೆ ಈ ಪಾಠದ ಅಗತ್ಯವೇ ಇಲ್ಲ ಎಂದು ಶಾಲೆಯವರು ನಿರ್ಧರಿಸಿದರೇ? ಅಥವಾ ಪಾಠದಲ್ಲಿ ಮಕ್ಕಳ ಮಟ್ಟದಲ್ಲಿ ತಿಳಿಸಲಾಗದಂತಹ ವಿಚಾರಗಳಿದ್ದವೇ? ಅಥವಾ ಇಂತಹ ವಿಚಾರಗಳ ಬಗೆಗೆ ಮಕ್ಕಳ ಜೊತೆ ಮಾತನಾಡಲು ಬೇಕಾದ ಕೌಶಲ್ಯದ ತರಬೇತಿಯನ್ನು ಇವರಿಗೆ ನೀಡಿರಲಿಲ್ಲವೇ? ತರಬೇತಿಯನ್ನೇ ನೀಡದೆ ಪಠ್ಯದಲ್ಲಿ ಇಂತಹ ವಿಚಾರಗಳನ್ನು ಹೇಗೆ ಸೇರಿಸಲಾಗಿತ್ತು? ರಾಜ್ಯದ ಇತರ ಶಾಲೆಗಳಲ್ಲಿ ಈ ಪಾಠವನ್ನು ಕಲಿಸಲಾಗುತ್ತಿದೆಯೇ? ಈ ಎಲ್ಲಾ ವಿಚಾರಗಳ ಬಗೆಗೆ ಪೋಷಕರ ಅಭಿಪ್ರಾಯಗಳು ಏನಿರಬಹುದು?

ಈ ಎಲ್ಲಾ ಅಂಶಗಳ ಬಗೆಗೆ ಯೋಚಿಸುತ್ತಾ ಹೋದಂತೆ ನನ್ನೆದುರು ಸಾಕಷ್ಟು ವಿಚಾರಗಳು ತೆರೆದುಕೊಂಡವು. ಇಂತಹ ವಿಚಾರಗಳಿಗೆ ಆಪ್ತಸಲಹೆ ಮತ್ತು ಮನೋಚಿಕಿತ್ಸೆಯ ನನ್ನ ವೃತ್ತಿಯ ಅನುಭವಗಳನ್ನು ಬೆರೆಸಿ ನಿಮ್ಮ ಮುಂದಿಡುತ್ತಿದ್ದೇನೆ.

## ಮುಗ್ಧತೆಯ ಹೊಸ್ತಿಲಲ್ಲಿ..

ಈ ಕೆಳಗಿನ ಅಂಶಗಳತ್ತ ಒಮ್ಮೆ ಗಮನ ಹರಿಸಿ. ಪರಿಸ್ಥಿತಿ ಎಷ್ಟು ಆತಂಕಭರಿತವಾಗಿದೆ ಎನ್ನುವುದು ನಿಮ್ಮ ಅರಿವಿಗೆ ಬರುತ್ತದೆ.

1. ಹನ್ನೆರಡು ವರ್ಷದ ಕಿಶೋರಿಯನ್ನು ಅವಳ ಅಮ್ಮ ಆಪ್ತಸಲಹೆಗೆ ಕರೆತಂದಿದ್ದರು. ಕೆಲದಿನಗಳಿಂದ ಶಾಲೆಗೆ ಹೋಗುವುದಕ್ಕೆ ಆಕೆ ಭಯಪಡುತ್ತಿದ್ದಳು. ವಿಷಯ ಸಂಗ್ರಹಣೆ ಮಾಡುತ್ತಾ ಹೋದಂತೆ ಅವಳು ಇತ್ತೀಚೆಗೆ ಋತುಮತಿಯಾಗಿರುವ ವಿಚಾರವು ತಿಳಿಯಿತು. 'ನಿನ್ನ ದೇಹದಲ್ಲಿ ಆಗಿರುವ ಬದಲಾವಣೆಯ ಬಗೆಗೆ ನಿನಗೆ ಏನು ಗೊತ್ತು?' ಎಂದು ಕಿಶೋರಿಯನ್ನು ಕೇಳಿದೆ. ಅವಳು ಮೌನವಾಗಿದ್ದಳು. ಕಿಶೋರಿಯ ತಾಯಿಯ ಕಡೆ ನೋಡಿದಾಗ ಅವರು ಹೇಳಿದ್ದು ಹೀಗೆ: 'ಮಗುವಿಗೆ ಆ... ಸಮಯದಲ್ಲಿ ಶುಚಿಯಾಗಿರುವುದು ಹೇಗೆ, ದೇವರ ಕೆಲಸಗಳನ್ನು ಮಾಡದೆ ಮಡಿಯನ್ನು ಕಾಪಾಡಿಕೊಳ್ಳುವುದು ಹೇಗೆ ಎಲ್ಲಾ ಹೇಳಿದೀವಿ.'

ಈ ರೀತಿಯ ಮಾಹಿತಿ ಮಗುವಿಗೆ ಉಪಯುಕ್ತವಾಗಿತ್ತೇ? ನಿಧಾನವಾಗಿ ಕಿಶೋರಿಯ ನಂಬಿಕೆಯನ್ನು ಗಳಿಸಿಕೊಳ್ಳುತ್ತಾ ಹೋದಾಗ ಅವಳಿಂದ ತಿಳಿದುಬಂದಿದ್ದು ಇಷ್ಟು: ತನ್ನ ದೇಹದಲ್ಲಾದ ಬದಲಾವಣೆ, ತನಗೆ ಬರುವ ಹೊಟ್ಟೆನೋವು, ಆಗುವ ರಕ್ತಸ್ರಾವ ಇವುಗಳ ಹಿನ್ನೆಲೆ ತಿಳಿದುಕೊಳ್ಳಲಾರದ ಅವಳು, ತನಗೆ ಯಾವುದೋ ಗುಣಪಡಿಸಲಾಗದ ದೊಡ್ಡ ಕಾಯಿಲೆಯಾಗಿದೆ ಎಂದುಕೊಂಡಿದ್ದಳು. ತಾಯಿಯ ಎದುರಿನಲ್ಲಿಯೇ ಕಿಶೋರಿಗೆ ಅವಳ ವಯಸ್ಸಿಗೆ ಅಗತ್ಯವಿರುವ ಮಾಹಿತಿಯನ್ನು ವೈಜ್ಞಾನಿಕವಾಗಿ ನೀಡುತ್ತಾ

